## ಹಳೆಕಾಲದ ಎಣ್ಣೆಯ ಗಿಂಡಿ

ಹಳೆಕಾಲದ ಎಣ್ಣೆಯ ಗಿಂಡಿಯು ನೋಡಲು ತುಂಬಾ ಅಪರೂಪವಾದ ವಸ್ತುವಾಗಿದೆ. ಈ ಎಣ್ಣೆಯ ಗಿಂಡಿಯನ್ನು ಹಿಂದಿನ ಕಾಲದಲ್ಲಿ ಬಳಸುತ್ತಿದ್ದರು. ಈಗ ಇದರ ಬಳಕೆ ಕಡಿಮೆಯಾಗಿದೆ. ಹಿಂದಿನ ಸಂಪ್ರದಾಯದ ಪ್ರಕಾರ ತವರು ಮನೆಯಿಂದ ಮಗಳನ್ನು ಮದುವೆ ಮಾಡಿ ಕೊಡುವಾಗ ತುಪ್ಪ ಬಿಸಿಮಾಡಿ ಕೊಡುವಂತಹ ಕ್ರಮವಿತ್ತು. ಆ ಸಂದರ್ಭದಲ್ಲಿ ತುಪ್ಪವನ್ನು ಬಿಸಿ ಮಾಡಿ ಈ ಗಿಂಡಿಯಲ್ಲಿ ಮದುಮಗಳಿಗೆ ಕೊಡುತ್ತಿದ್ದರು. ಈ ಹಳೆಕಾಲದ ಎಣ್ಣೆಗಿಂಡಿಯು ಕಾಣಸಿಕ್ಕಿದ್ದು ದಕ್ಷಿಣಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಲಿಮಲೆಯ 24ನೇ ಕನ್ನಡ ಸಾಹಿತ್ಯ ಸಮ್ಮೇಳನದ ವಸ್ತು ಪ್ರದರ್ಶನದಲ್ಲಿ.

—ಶೈಲಶ್ರೀ ಬಾಯಾರ್, ಪುತ್ತೂರು





## ಮೂಲೆ ಸೇರಿದ ಚಿಮಣಿ ಬುಡ್ಡಿ.!

ಹಿಂದಿನ ಕಾಲದಲ್ಲಿ ಬಡವರಿಗೆ ರಾತ್ರಿ ಹೊತ್ತಿನಲ್ಲಿ ಇದ್ದ ಏಕೈಕ ಆಸರೆಯೆಂದರೆ ಅದು ಚಿಮಣಿ ದೀಪ. ಬುಡ್ಡಿ ದೀಪಗಳೆಂತಲೂ ಇದನ್ನು ಕರೆಯಲಾಗುತ್ತದೆ. ಇದರ ಬೆಳಕಿನಲ್ಲೇ ಓದಿ ಬಾಳಿನಲ್ಲಿ ಬೆಳಕು ಕಂಡವರಿಗಂತೂ ಲೆಕ್ಕವೇ ಇಲ್ಲ. ಆದರೆ ಈಗ ಮೊಬೈಲ್, ಬ್ಯಾಟರಿ ಇತ್ಯಾದಿ ಬೆಳಕು ತೋರಿಸಲು ಮುಂಚೂಣಿಗೆ ಬಂದಿದ್ದು ಕಾಲನ ಹೊಡೆತಕ್ಕೆ ಸಿಲುಕಿ ಚಿಮಣಿಗಳು ಅಟ್ಟ ಸೇರಿರುವದು ಮಾತ್ರ ವಿಪರ್ಯಾಸ!

—ಶ್ರೀರಂಗ ವೆಂ. ಕಟ್ಟಿ, ಯಲ್ಲಾಪುರ

## ಎಲೆಲೆ ಎಲೆ ಕೀಟ

ಇತ್ತೀಚೆಗೆ ಗೆಳೆಯ ಸತೀಶನೊಂದಿಗೆ ದೊಡ್ಡಬಳ್ಳಾಪುರಕ್ಕೆ ಹೋಗಿದ್ದಾಗ, ಅಲ್ಲಿನ ಹಲಸಿನ ಮರವೊಂದರಲ್ಲಿ ಕಂಡಿದ್ದು ಈ ಚಿತ್ರದಲ್ಲಿರುವ ಕೀಟ.

ನೀವು ಸೂಕ್ಷ್ಮವಾಗಿ ನೋಡಿದರೆ ಮಾತ್ರ ಈ ಹಲಸಿನ ಎಲೆಯೊಂದಿಗೆ ಮರೆಮಾಚಿಕೊಂಡಿರುವ ಅದ್ಭುತ ಕೀಟ ಗೋಚರಿಸುತ್ತದೆ. ಈ ತರಹದ ಕೀಟಗಳು ತಮ್ಮನ್ನು ತಾವು ಕಾಪಾಡಿಕೊಳ್ಳಲು ತಮ್ಮ ಸುತ್ತಲಿರುವ ಪರಿಸರ ಜಾಗವನ್ನೇ ಅನುಕರಣೆ ಮಾಡುತ್ತವೆ. ಇವುಗಳಿಗೆ ಇಂಗ್ಲಿಷ್‌ನಲ್ಲಿ ಕಮೂಫ್ಲೇಜ್ ಲೀಫ್ ಇನ್‌ಸೆಕ್ಟ್ (Camouflage leaf insect) ಎಂದು ಕರೆಯುತ್ತಾರೆ.

—ಪ್ರಶಾಂತ್ ಮಯ್ಯ, ಸಾಗರ

